OS No. 488/2011
**PW-4**

**Cross examination by Sri.AKG Counsel for the Defendants.**

Witness Duly Sworn on : 18-07-2019

1. ನಾನು ಕಳೆದ 25 ವರ್ಷಗಳಿಂದ ಕಟ್ಟಡ ಕೆಲಸ ಮಾಡುತ್ತಿದ್ದೇನೆ. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. 1 ನೇ ಪ್ರತಿವಾದಿಯ ತಂದೆ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನನಗೆ ವೈಯಕ್ತಿಕವಾಗಿ ಪರಿಚಯವಿದ್ದಾರೆ. ಕಳೆದ 7-8 ವರ್ಷಗಳಿಂದ ನನಗೆ ಸದರಿಯವರ ಪರಿಚಯವಿದೆ. ವಾದಿಯು ನನಗೆ ಕೂಡಾ 7-8 ವರ್ಷಗಳಿಂದ ಪರಿಚಯವಿದ್ದಾರೆ. ಸದರಿ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿದಾದರೆ ಎಂದು ನನಗೆ ಗೊತ್ತಿಲ್ಲ.

2. ಸದರಿ ದಾವೆ ಗೋಡೆಯ ವಿಚಾರವಾಗಿ ನಡೆದಿದೆ. ನಾನು ಸಾಮಾನ್ಯವಾಗಿ ಕಟ್ಟಡ ಕಟ್ಟುವಾಗ ಮಾಲೀಕತ್ವದ ಬಗ್ಗೆ ತಿಳಿದುಕೊಳ್ಳುತ್ತೇನೆ. ವಾದಿಯು ಯಾವ ದಿನಾಂಕ ಮತ್ತು ತಿಂಗಳಿನಲ್ಲಿ ನನಗೆ ಕಟ್ಟಡ ಕಟ್ಟಲು ಹೇಳಿದ್ದರು ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2011 ರಲ್ಲಿ ಹೇಳಿದ್ದರು ಎಂದು ನುಡಿಯುವರು. ವಾದಿ ದಾವಾ ಗೋಡೆಯನ್ನು ಹೇಗೆ ಕಟ್ಟಬೇಕೆಂದು ನಕಾಶೆ ಕೊಟ್ಟಿರಲಿಲ್ಲ. ವಾದಿಯ ಮನೆಯ ಜಾಗದ ಉದ್ದ ಮತ್ತು ಅಗಲ ಎಷ್ಟು ಅಳತೆ ಇದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಈ ಕುರಿತು ಸದರಿಯವರ ಮನೆಯ ಅಳತೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನನಗೆ ಕೊಟ್ಟಿಲ್ಲ.

3. ವಾದಿಯ ಮನೆಯ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪೂರ್ವ ಪಶ್ಚಿಮ ಎಂದು ಹೇಳಿದರೆ ನನಗೆ ಗೊತ್ತಾಗುವುದು ಎಂದು ನುಡಿಯುವರು. ವಾದಿಯ ಮನೆಯ ದಕ್ಷಿಣಕ್ಕೆ ಯಾರ ಜಾಗವಿದೆ ಎಂದು ನನಗೆ ಗೊತ್ತಿಲ್ಲ, ಉತ್ತರಕ್ಕೆ ಯಾರ ಜಾಗವಿದೆ ಎಂದು ನನಗೆ ಗೊತ್ತಿಲ್ಲ, ಪೂರ್ವಕ್ಕೆ ಗುರಬಸಪ್ಪ ಎಂಬುವವರ ಜಾಗವಿದೆ. ಸದರಿ ಗುರಬಸಪ್ಪನವರ ತಂದೆ ಹೆಸರು ಮತ್ತು ಅಡ್ಡಹೆಸರು (ಸರ್ ನೆಮ್) ಏನು ಎಂದು ನನಗೆ ಗೊತ್ತಿಲ್ಲ. ಸದರಿ ಗುರುಬಸಪ್ಪನವರಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದು

ನನಗೆ ಗೊತ್ತಿಲ್ಲ. ಸದರಿಯವರ ಮನೆಯ ನಂಬರ ನನಗೆ ಗೊತ್ತಿಲ್ಲ. ಸದರಿ ಯವರ ಮನೆಯ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಎಷ್ಟು ಅಳತೆ ಇದೆ ಎಂದು ನನಗೆ ಗೊತ್ತಿಲ್ಲ.

5. ನಾನು ವಾದಿಯ ಮನೆಯ ದಾವಾ ಗೋಡೆಯನ್ನು ಕಟ್ಟುವಾಗ ಯಾವುದೇ ದಾಖಲತಿಗಳನ್ನು ಮಾಡಿಕೊಂಡಿಲ್ಲ. ಸಾಮಾನ್ಯವಾಗಿ ಕಟ್ಟಡ ಕಟ್ಟುವಾಗ ಕಾಗದಪತ್ರಗಳನ್ನು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾವು ಮಾಹಿತಿ ಕೊಟ್ಟು ಬರೆಸಿದ್ದೇವು. ನಾವು ಎಂದರೆ ನಾನು ಮತ್ತು ಬರೆದಿರುವವರು. ಸಾಕ್ಷ್ಯ ಪ್ರಮಾಣ ಪತ್ರವನ್ನು ಟೈಪಿಸ್ಟ ಬರೆದಿದ್ದಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲು ಟೈಪಿಸ್ಟಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ.

ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ನ್ಯಾಯಾಲಯದವರಿಗೆ ಸಹಕರಿಸದೇ ಇದ್ದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು
ಬಸವನ ಬಾಗೇವಾಡಿ.